<u>ಸಾಕ್ಷಿಯನ್ನು ದಿನಾಂಕಃ **26.10.2024** ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಡಿ.ಎನ್.ಟಿ. ವಕೀಲರಿಂದಃ</u>

ಆರೋಪಿಗೆ ನಾನು ನಗದು ರೂಪದಲ್ಲಿ ಹಣ ನೀಡಿದ್ದೇನೆ. ನಾನು ಆರೋಪಿಗೆ ರೂ.1,50,000/–ಒಂದೇ ಸಲ ನೀಡಿದ್ದೇನೆ. ಸದರಿ ಹಣ ನಿಮ್ಮ ಹತ್ತಿರ ಹೇಗೆ ಬಂತು ಎಂದರೆ ಜಮೀನ್ನು ಮಾರಿದ ಹಣದಿಂದ ಬಂತು ಮತ್ತು ನನ್ನ ತಂದೆಯು ದುಡಿದು ಬಂದ ಹಣದಿಂದ ನಾನು ಆರೋಪಿಗೆ ಹಣ ನೀಡಿದ್ದೇನೆ. ಆರೋಪಿಗೆ ನಾನು ರೂ.500/– ಮುಖಬೆಲೆಯ 200 ನೋಟುಗಳನ್ನು 2 ಕಟ್ಟುಗಳಲ್ಲಿ ನಾನು ಆರೋಪಿಗೆ ನೀಡಿದ್ದೇನೆ. ದಿಃ 14.12.2021 ರಲ್ಲಿ ನಾನು ಆರೋಪಿಗೆ ನನ್ನ ಮನೆಯ ಹತ್ತಿರ ಹಣ ನೀಡಿದ್ದೇನೆ ಮತ್ತು ಅದೇ ದಿನ ಆರೋಪಿ ನನಗೆ ಚೆಕ್ ನೀಡಿದರು. ಜಮೀನು ಮಾರಿದ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿದ್ದೀರ ಎಂದರೆ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಹಣ ನೀಡಿದಾಗ ಮತ್ತು ಆರೋಪಿ ನನಗೆ ಚೆಕ್ ನೀಡಿದಾಗ ನಾನು ಮತ್ತು ಆರೋಪಿ ಇಬ್ಬರೇ ಇದ್ದೆವು, ಸಂಜೆ 5.30–6.00 ಗಂಟೆಯಾಗಿತ್ತು. ನಮ್ಮ ಊರಿಗೂ ಮತ್ತು ಆರೊಪಿಯ ಊರಿಗೂ 3–4 ಕಿ.ಮೀ. ಅಂತರವಿದೆ. ಆರೋಪಿ ನನಗೆ 2019 ರಿಂದ ಪರಿಚಯ.

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ.ಹೆ.ಕೇ.ಸರಿ ಇದೆ.

Sd/-

2 ನೇ ಅಪರ ಸಿವಿಲ್ ನ್ಯಾಯಾಧೀಶರು,

ಮಾಲೂರು.